**All India Radio: Bangalore**
**National Bulletins In Kannada**
**14.07.2025 / 1.10pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**14.07.2025 / 1.10pm**
**<><*<><>*><>**

ಮುಖ್ಯಾಂಶಗಳು

೧. ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್, ಚೀನಾ ಉಪಪ್ರಧಾನಿಯೊಂದಿಗೆ ಮಾತುಕತೆ ; ಭಾರತ-ಚೀನಾ ಸಂಬಂಧ ವೃದ್ಧಿಗೊಳಿಸಲು ಒತ್ತು

೨. ಆಕ್ಸಿಯಂ-೪ ಮಿಷನ್ ; ಶುಭಾಂಶು ಶುಕ್ಲ ಸೇರಿ ನಾಲ್ವರು ಗಗನಯಾತ್ರಿಗಳು ಇಂದು ಭುವಿಗೆ ಮರಳಿ ಪ್ರಯಾಣ

೩. ಭಾರತದ ವೈಜ್ಞಾನಿಕ ಪ್ರಗತಿಯ ಸಂಕೇತವಾದ ಚಂದ್ರಯಾನ-೩ ಯೋಜನೆಗೆ ೨ ವರ್ಷ

೪. ಮ್ಯಾನ್ಮಾರ್‌ನಲ್ಲಿ ನಿಷೇಧಿತ ಭಯೋತ್ಪಾದಕರ ಹತ್ಯೆ ಪ್ರಕರಣದಲ್ಲಿ ಯಾವುದೇ ಪಾತ್ರವಿಲ್ಲ - ಭಾರತೀಯ ಸೇನೆ ಸ್ಪಷ್ಟನೆ

೫. ಆಂಡರ್ಸನ್-ತೆಂಡುಲ್ಕೂರ್ ಟ್ರೋಫಿ ; ಇಂಗ್ಲೆಂಡ್ ವಿರುದ್ಧದ ೩ನೇ ಟೆಸ್ಟ್ ಪಂದ್ಯದ ಕೊನೆಯ ದಿನದಾಟದಲ್ಲಿಂದು ಗೆಲುವಿನ ತವಕದಲ್ಲಿ ಭಾರತ

><><><><><><><><

ಪ್ರಸ್ತುತ ಗಂಭೀರ ಅಂತಾರಾಷ್ಟ್ರೀಯ ಪರಿಸ್ಥಿತಿಗಳ ನಡುವೆ ಭಾರತ ಹಾಗೂ ಚೀನಾ ನಡುವೆ ಮುಕ್ತ ಅಭಿಪ್ರಾಯ ವಿನಿಮಯದ ಅವಶ್ಯಕತೆಯನ್ನು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಒತ್ತಿ ಹೇಳಿದ್ದಾರೆ. ಚೀನಾ ಪ್ರವಾಸದಲ್ಲಿರುವ ಅವರು, ಬೀಜಿಂಗ್‌ನಲ್ಲಿಂದು ಚೀನಾ ಉಪ ಅಧ್ಯಕ್ಷ ಹ್ಯಾನ್ ಜೆಂಗ್ ಅವರೊಂದಿಗೆ ಸಭೆ ನಡೆಸಿದರು. ಈ ವೇಳೆ ಭಾರತ-ಚೀನಾ ನಡುವಿನ ಸಂಬಂಧಗಳನ್ನು ಸಾಮಾನ್ಯ ಸ್ಥಿತಿಗೆ ತರುವ ಕುರಿತಂತೆ ಮಾತುಕತೆಗಳು ಮುಂದುವರೆಸಲು ಒತ್ತು ನೀಡಿದ ಅವರು, ಈ ಮಾತುಕತೆಗಳು ಉಭಯ ರಾಷ್ಟ್ರಗಳಿಗೆ ಪರಸ್ಪರ ಲಾಭದಾಯಕ ಫಲಿತಾಂಶಗಳನ್ನು ತಂದು ಕೊಡಬಹುದು. ಕಳೆದ ಅಕ್ಟೋಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ

ಹಾಗೂ ಚೀನಾ ಅಧ್ಯಕ್ಷ ಕ್ಷಿ ಜಿನ್ ಪಿಂಗ್ ಅವರ ನಡುವಿನ ಸಭೆಯ ಬಳಿಕ ಉಭಯ ರಾಷ್ಟ್ರಗಳ ಸಂಬಂಧ ಸುಧಾರಿಸಿದೆ ಅವರ ಈ ಭೇಟಿಯು ಅದೇ ಹಾದಿಯಲ್ಲಿ ಮುಂದುವರೆಯುವ ಭರವಸೆ ವ್ಯಕ್ತಪಡಿಸಿದ್ದಾರೆ. ಕೈಲಾಸ ಮಾನಸ ಸರೋವರ ಯಾತ್ರೆಯ ಪುನರಾರಂಭವನ್ನು ಭಾರತದಲ್ಲಿ ವ್ಯಾಪಕವಾಗಿ ಪ್ರಶಂಸಿಸಲಾಗಿದೆ. ಶಾಂಘೈ ಸಹಕಾರ ಸಂಘದಲ್ಲಿ ಚೀನಾದ ಯಶಸ್ವಿ ಅಧ್ಯಕ್ಷತೆಯನ್ನು ಭಾರತ ಬೆಂಬಲಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಧ್ವನಿ : ಡಾ. ಎಸ್. ಜೈಶಂಕರ್ (೩೦ ಸೆಕೆಂಡ್‌ಗಳು)

ನಾಳೆ ಡಾ. ಎಸ್. ಜೈಶಂಕರ್, ಟಿಯಾಂಜಿನ್ ನಗರದಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಸ್ಥೆ-ಎಸ್‌ಸಿಒ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಭೆಯಲ್ಲಿ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ವಿವಿಧ ಕ್ಷೇತ್ರಗಳಲ್ಲಿ ಎಸ್‌ಸಿಒ ಸಹಕಾರ ಮತ್ತು ಪ್ರಮುಖ ಅಂತಾರಾಷ್ಟ್ರೀಯ ಹಾಗೂ ಪ್ರಾದೇಶಿಕ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಎಸ್‌ಸಿಒ ಒಕ್ಕೂಟದಲ್ಲಿ ಭಾರತ, ಚೀನಾ, ರಷ್ಯಾ, ಇರಾನ್, ಕಜಾಕಿಸ್ಥಾನ್, ಕಿರ್ಗಿಸ್ಥಾನ್, ಪಾಕಿಸ್ತಾನ, ತಜಾಕಿಸ್ತಾನ್, ಉಜ್ಬೆಕಿಸ್ತಾನ್ ಮತ್ತು ಬೆಲಾರಸ್ ಸೇರಿದಂತೆ ೧೦ ಸದಸ್ಯ ರಾಷ್ಟ್ರಗಳಿವೆ. ಪ್ರಸ್ತುತ ಚೀನಾ ಎಸ್‌ಸಿಒದ ಅಧ್ಯಕ್ಷತೆ ವಹಿಸಿದ್ದು, ಈ ಸಭೆಗಳ ಆತಿಥ್ಯ ವಹಿಸಿದೆ.

><><><><><><><><

ಭಾರತೀಯ ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಹಾಗೂ ಅಕ್ಸಿಯಮ್-೪ ಮಿಷನ್‌ನ ಮೂವರು ಇತರ ಸಿಬ್ಬಂದಿ ಇಂದು ಮರಳಿ ಭೂಮಿಗೆ ಪ್ರಯಾಣ ಬೆಳೆಸಲಿದ್ದಾರೆ. ಅವರು ನಾಳೆ ಮಧ್ಯಾಹ್ನ ೩ ಗಂಟೆ ಸುಮಾರಿಗೆ ಭೂಮಿಗೆ ಮರಳಲಿದ್ದಾರೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ತಮ್ಮ ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಸಚಿವರು, ಭಾರತೀಯ ಕಾಲಮಾನ ಇಂದು ಸಂಜೆ ೪:೩೦ ಕ್ಕೆ ಅನ್‌ಡಾಕ್ ಮಾಡುವ ಕಾರ್ಯವನ್ನು ಯೋಜಿಸಲಾಗಿದೆ ಎಂದು ಹೇಳಿದ್ದಾರೆ. ಭೂಮಿಗೆ ಮರಳಿದ ನಂತರ, ಗ್ರೂಪ್ ಕ್ಯಾಪ್ಟನ್ ಶುಕ್ಲಾ ಮತ್ತು ಇತರ ಸಿಬ್ಬಂದಿ, ಭೂಮಿಯ ಗುರುತ್ವಾಕರ್ಷಣೆಗೆ ಪುನಃ ಹೊಂದಿಕೊಳ್ಳುವ ಸಲುವಾಗಿ 'ಫ್ಲೈಟ್ ಸರ್ಜನ್'ಗಳ ಮೇಲ್ವಿಚಾರಣೆಯಲ್ಲಿ ೭ ದಿನಗಳ ಪುನಶ್ಚೇತನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ತಮ್ಮ ಪ್ರಯಾಣದ ಕುರಿತು ಮಾತನಾಡಿರುವ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲ ಅಂತಾರಾಷ್ಟ್ರೀಯ

ಬಾಹ್ಯಾಕಾಶ ನಿಲ್ದಾಣದಲ್ಲಿ ಕಳೆದ ೨ ವಾರಗಳಲ್ಲಿ ಹಲವು ಪ್ರಯೋಗಗಳನ್ನು ನಡೆಸಲಾಗಿದೆ. ಇದೊಂದು ಅದ್ಭುತ ಪಯಣವಾಗಿದ್ದು, ಇದರ ಯಶಸ್ಸಿಗೆ ತಮ್ಮ ತಂಡದಲ್ಲಿರುವ ಎಲ್ಲರೂ ಕಾರಣರಾಗಿದ್ದಾರೆ ಎಂದು ತಿಳಿಸಿದ್ದಾರೆ.

><><><><><><><><

ಭಾರತದ ವೈಜ್ಞಾನಿಕ ಪ್ರಗತಿಯ ಸಂಕೇತವಾದ ಚಂದ್ರಯಾನ -೩ ಯೋಜನೆ ಇಂದು ೨ ವರ್ಷಗಳನ್ನು ಪೂರೈಸಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ ಅಭಿವೃದ್ಧಿಪಡಿಸಿದ ಎಲ್‌ವಿಎಂ-೩ ಎಂ-೪ ರಾಕೆಟ್ ಮೂಲಕ ೨೦೨೩ರ ಈ ದಿನ ಚಂದ್ರಯಾನ-೩ ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ಚಂದ್ರನ ದಕ್ಷಿಣ ದ್ರುವದ ಸಮೀಪ ಎತ್ತರ ಪ್ರದೇಶಗಳಲ್ಲಿ ಲ್ಯಾಂಡರ್ ಮತ್ತು ರೋವರ್ ಇಳಿಸುವುದು ಹಾಗೂ ಚಂದ್ರನ ಮೇಲೆ ಯಶಸ್ವಿಯಾಗಿ ಸಂಚರಿಸುವ ಸಾಮರ್ಥ್ಯವನ್ನು ಪ್ರದರ್ಶಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಗಾಗಿ ಪ್ರಾಪಲ್ಷನ್ ಮಾಡ್ಯೂಲ್, ಲ್ಯಾಂಡರ್ ಮತ್ತು ರೋವರ್ ಸೇರಿದಂತೆ ವಿವಿಧ ನಿರ್ಣಾಯಕ ಭಾಗಗಳನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾಗಿತ್ತು. ೨೦೨೩ರ ಆಗಸ್ಟ್ ೨೩ ರಂದು ಚಂದ್ರಯಾನ-೩ ಯಶಸ್ವಿಯಾಗಿ ಚಂದ್ರಯಾನ ದಕ್ಷಿಣ ದ್ರುವದಲ್ಲಿಳಿಯಿತು. ಆ ಮೂಲಕ ಭಾರತ ಚಂದ್ರನ ಮೇಲೆ ಇಳಿದ ೪ನೇ ರಾಷ್ಟ್ರ ಹಾಗೂ ದಕ್ಷಿಣ ದ್ರುವ ಸ್ಪರ್ಶಿಸಿದ ಮೊದಲ ರಾಷ್ಟ್ರವೆಂಬ ದಾಖಲೆ ನಿರ್ಮಿಸಿತು. ವಿಕ್ರಮ್ ಲ್ಯಾಂಡರ್, ಪ್ರಜ್ಞಾನ್ ರೋವರ್ ಇಳಿದ ಜಾಗವನ್ನು ಪ್ರಧಾನಿನರೇಂದ್ರ ಮೋದಿ ಶಿವಶಕ್ತಿ ಎಂದು ನಾಮಕರಣ ಮಾಡಿದರು.

><><><><><><><><

ಮ್ಯಾನ್ಮಾರ್‌ನಲ್ಲಿ ನಿಷೇಧಿತ ಭಯೊತ್ಪಾದಕ ಗುಂಪಿನ ಮೂವರು ಉನ್ನತ ನಾಯಕರು ಸೇರಿದಂತೆ ೧೯ ಯುನೈಟೆಡ್ ಲಿಬರೇಶನ್ ಫ್ರಂಟ್ ಆಫ್ ಅಸೋಮ್-ಇಂಡಿಪೆಂಡೆಂಟ್ (ಗಐಈಂ-ಖ) ಕಾರ್ಯಕರ್ತರನ್ನು ಹತ್ಯೆಗೈದ ಯಾವುದೇ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆಯು ಭಾಗಿಯಾಗಿಲ್ಲ ಎಂದು ಸ್ಪಷ್ಟವಾಗಿ ನಿರಾಕರಿಸಿದೆ. ಅಂತಹ ಕಾರ್ಯಾಚರಣೆಯ ಬಗ್ಗೆ ಭಾರತೀಯ ಸೇನೆಯೊಂದಿಗೆ ಯಾವುದೇ ಮಾಹಿತಿ ಇಲ್ಲ ಎಂದು ರಕ್ಷಣಾ ಸಾರ್ವಜನಿಕ ಸಂಪರ್ಕ ಅಧಿಕಾರಿ ಎಂಎಸ್ ರಾವತ್ ಗುವಾಹಟಿಯಲ್ಲಿ ತಿಳಿಸಿದ್ದಾರೆ. ಪರೇಶ್ ಬರುವಾ ನೇತೃತ್ವದ ನಿಷೇಧಿತ ಗುಂಪಿನ ಭಯೊತ್ಪಾದಕ ಗುಂಪು, ಮ್ಯಾನ್ಮಾರ್‌ನಲ್ಲಿರುವ ತನ್ನ ಪೂರ್ವ ಪ್ರಧಾನ ಕಚೇರಿಯನ್ನು ನಿನ್ನೆ

ಮುಂಜಾನೆ ಭಾರತೀಯ ಸೇನೆಯು ಡ್ರೋನ್‌ಗಳ ಮೂಲಕ ಗುರಿಯಾಗಿಸಿಕೊಂಡಿದೆ ಎಂದು ಹೇಳಿಕೊಂಡಿದೆ.

><><><><><><><><><

ಹಿರಿಯ ನಟಿ ಬಿ. ಸರೋಜಾದೇವಿ ಇಂದು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ಇವರಿಗೆ ೮೭ ವರ್ಷ ವಯಸ್ಸಾಗಿತ್ತು. ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ೭ ದಶಕಗಳ ಕಾಲ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದ್ದ ಇವರು, ಅಭಿನಯ ಸರಸ್ವತಿ ಎಂದು ಖ್ಯಾತರಾಗಿದ್ದರು. ಕನ್ನಡ ಮಾತ್ರವಲ್ಲದೇ ಅವರು ತಮಿಳು, ತೆಲುಗು ಸಿನಿಮಾ ರಂಗಕ್ಕೂ ಅಮೂಲ್ಯ ಕೊಡುಗೆ ನೀಡಿದ್ದು, ೧೦೦ಕ್ಕೂ ಅಧಿಕ ಚಲನಚಿತ್ರಗಳಲ್ಲಿ ನಟಿಸಿ, ಜನಮನ ಗೆದ್ದಿದ್ದರು. ಅಪ್ರತಿಮ ನಟರಾದಂತಹ ಡಾ. ರಾಜಕುಮಾರ್, ಕಲ್ಯಾಣಕುಮಾರ್ ಸೇರಿದಂತೆ ಅನೇಕರೊಂದಿಗೆ ಅಮರಶಿಲ್ಪಿ ಜಕಣಾಚಾರಿ, ಭಾಗ್ಯವಂತರು, ಬಭ್ರುವಾಹನ ಮತ್ತು ಕಥಾಸಂಗಮ ಚಲನಚಿತ್ರಗಳಲ್ಲಿ ಅಭಿನಯಿಸಿ ಮೆಚ್ಚುಗೆಗೆ ಪಾತ್ರರಾಗಿದ್ದರು. ಭಾರತೀಯ ಚಿತ್ರರಂಗಕ್ಕೆ ಅವರು ನೀಡಿದಂತ ಅಮೂಲ್ಯ ಕೊಡುಗೆಗಳಿಗಾಗಿ ಅವರಿಗೆ ಭಾರತ ಸರ್ಕಾರ ಪದ್ಮಭೂಷಣ ಹಾಗೂ ಪದ್ಮಶ್ರಿ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ೭೦ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ. ಕರ್ನಾಟಕ ಸರ್ಕಾರ ಡಾ. ರಾಜಕುಮಾರ್ ಜೀವಮಾನ ಸಾಧನೆ ಪ್ರಶಸ್ತಿ, ತಮಿಳುನಾಡು ಸರ್ಕಾರ ಕಲೈಮ ಮಣಿ ಜೀವಮಾನ ಸಾಧನೆ ಪ್ರಶಸ್ತಿ ಹಾಗೂ ಆಂಧ್ರಪ್ರದೇಶ ಸರ್ಕಾರ ಎನ್‌ಟಿಆರ್ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

><><><><><><><><><

ನ್ಯಾಷನಲ್ ಹೆರಾಲ್ಡ್ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹಿರಿಯ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಹಾಗೂ ಇತರರ ವಿರುದ್ಧ ಜಾರಿ ನಿರ್ದೇಶನಾಲಯ ಸಲ್ಲಿಸಿರುವ ಪ್ರಾಸಿಕ್ಯೂಷನ್ ದೂರಿನ ವಿಚಾರಣೆಯ ಆದೇಶವನ್ನು ದೆಹಲಿ ನ್ಯಾಯಾಲಯ ಕಾಯ್ದಿರಿಸಿದೆ. ಈ ತಿಂಗಳ ೧೯ ರಂದು ವಿಚಾರಣೆಗೆ ನ್ಯಾಯಾಲಯ ದಿನ ನಿಗದಿಪಡಿಸಿದೆ.

><><><><><><><><

ಕಿರ್ಗಿಸ್ತಾನದ ಬಿಸ್ಕೇಕ್‌ನಲ್ಲಿ ನಡೆದ ೨೦ ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್ ಶಿಪ್‌ನಲ್ಲಿ ಭಾರತದ ಫ್ರೀಸ್ಟೈಲ್ ಕುಸ್ತಿ ತಂಡ ೨ ಚಿನ್ನ ೧ ಬೆಳ್ಳಿ ೫ ಕಂಚಿನ ಪದಕಗಳೊಂದಿಗೆ ಒಟ್ಟು ೧೫೭ ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ೨ನೇ ಸ್ಥಾನ ಅಲಂಕರಿಸಿದೆ.

><><><><><><><><

ಲಂಡನ್‌ನ ಐತಿಹಾಸಿಕ ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆಂಡರ್ಸನ್ ತೆಂಡಲ್ಕೂರ್ ಟ್ರೋಫಿಯ ಟೆಸ್ಟ್ ಕ್ರಿಕೆಟ್ ಸರಣಿಯ ಮೂರನೇ ಪಂದ್ಯದ ಕೊನೆಯ ದಿನದಾಟವಾದ ಇಂದು ಭಾರತ ಇಂಗ್ಲೆಂಡ್ ನೀಡಿರುವ ೧೯೩ ರನ್‌ಗಳು ಗುರಿಯನ್ನು ಬೆನ್ನಟ್ಟಲಿದೆ. ೪ನೇ ದಿನವಾದ ನಿನ್ನೆ ಇಂಗ್ಲೆಂಡ್ ತಂಡವನ್ನು ಕೇವಲ ೧೯೨ ರನ್‌ಗಳಿಗೆ ಆಲ್‌ಔಟ್ ಮಾಡುವಲ್ಲಿ ಸಫಲವಾದ ಭಾರತ ದಿನದಂತ್ಯಕ್ಕೆ ೪ ವಿಕೆಟ್ ನಷ್ಟಕ್ಕೆ ೫೮ ರನ್ ಗಳಿಸಿದೆ. ಪ್ರಸ್ತುತ ೩೩ ರನ್‌ಗಳಿಸಿರುವ ಕೆ.ಎಲ್. ರಾಹುಲ್ ಕಣದಲ್ಲಿದ್ದಾರೆ.

><><><><><><><><